

ಕೊಂಬೆಯ ಮೇಲೆ ಕುಳಿತು ಕೂಗುತ್ತಿತ್ತು. ಅದೇ ಅದರ ವಾಸಸ್ಥಾನ. ನಮ್ಮ ಅಮ್ಮ ಆ ಜಾಗಕ್ಕೆ ಗುಮ್ಮನ ಗೊಳ್ಳ ಎಂದು ಹೆಸರಿಟ್ಟಿದ್ದರು. ಮಳೆನೀರು ಗೆರೆಯ ಮೇಲಿಂದ ನೆಗೆದು ಆಳವಾದ ಕಂದರವಾಗಿಸುತ್ತಾ ಕೂಗಿನ ಮತ್ತು ವಾಟೆ ಬಿದಿರಿನ ಮೆಳೆಗಳಿದ್ದವು. ಅದು ಯಾವಾಗಲೂ ಸೂರ್ಯನ ಕಿರಣಗಳು ಬೀಳದೆ ಕಪ್ಪಗಿರುತ್ತಿತ್ತು. ಹಾಗಾಗಿ ಅಮ್ಮ ಆ ಜಾಗವನ್ನು ಗೊಳ್ಳ ಎಂದು ಕರೆದಿರಬಹುದು. ಗೊಳ್ಳದ ಒಂದು ಬದಿಯಿಂದ ಜಲ ಬರುತ್ತಿತ್ತು. ತಂಪುತಂಪಾದ ವಾತಾವರಣ. ಹಾಗಾಗಿ ವರ್ಷವೆಲ್ಲಾ ಅಲ್ಲಿ ನೀರು. ಇಂದಿನ ಎ.ಸಿ.ಯ ಅನುಭವ ನಮಗೆ ಅಂದೇ ಆಗುತ್ತಿತ್ತು. ಹಳ್ಳಗಾವಲಿ ತುಂಬಿ ಹರಿಯುವುದು ಮಾತ್ರವಲ್ಲ ಏಲಕ್ಕಿ ಗಿಡಗಳ ಪಕ್ಕದಲ್ಲಿದ್ದ ದೊಡ್ಡದೊಡ್ಡ ಕಲ್ಲುಗಳ ಸಂದಿಯಲ್ಲಿ ಕಲ್ಲೇಡಿಗಳು ಯಥೇಚ್ಚವಾಗಿ